**ಪಾಠ–5** **ಜನವರಿ 26–ಫೆಬ್ರವರಿ 1**

# ಏಳು ಮುದ್ರೆಗಳು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಪ್ರಕಟನೆ 6:1–17, ಯಾಜಕಕಾಂಡ 26:21–26 ಯೆಹೆಜ್ಕೇಲನು 4:16, ಧರ್ಮೋಪದೇಶಕಾಂಡ 32:43, 2 ಥೆಸಲೋನಿಕದವರಿಗೆ 1:7–10.

**ಸ್ಮರಣವಾಕ್ಯ : "ಅವರು ಹೊಸ ಹಾಡನ್ನು ಹಾಡುತ್ತಾ. ನೀನು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಗಳನ್ನು ಒಡೆಯುವುದಕ್ಕೆ ಯೋಗ್ಯನೇ; ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ; ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯೂ ಮಾಡಿದಿ; ಅವರು ಭೂಮಿಯ ಮೇಲೆ ಆಳುವರು ಎಂದು ಹೇಳಿದರು" (ಪ್ರಕಟನೆ 5:9,10).**

ಪ್ರಕಟನೆ 4 ಮತ್ತು 5ನೇ ಅಧ್ಯಾಯಗಳ ದೃಶ್ಯವು 6ನೇ ಅಧ್ಯಾಯದಲ್ಲೂ ಮುಂದುವರೆದಿದೆ, ಇದು ಮುದ್ರಿತ ಸುರುಳಿಯನ್ನು ಬಿಚ್ಚಲು ಕ್ರಿಸ್ತನು ಯೋಗ್ಯನೆಂದು ವಿವರಿಸುತ್ತದೆ, ಯಾಕೆಂದರೆ ಅವರ ಜೀವನ ಮತ್ತು ಮರಣದ ಜಯದ ಮೂಲಕ ಆದಾಮನ ಮೂಲಕ ಕಳೆದುಕೊಂಡದ್ದನ್ನು ಆತನು ಹಿಂಪಡೆದನು. ರಕ್ಷಣೆ ಯೋಜನೆಯನ್ನು ಕಟ್ಟ ಕಡೆಯದಾಗಿ ಮುಂದೆ ಸಾಗಿಸಲು, ಸುರುಳಿಯ ಮುದ್ರೆಯನ್ನು ತೆರೆಯಲು, ಅವರು ಈಗ ಸಿದ್ಧರಾಗಿದ್ದಾರೆ.

ಪಂಚಾಶತ್ತಮವು ಸುವಾರ್ತೆ ಹರಡುವಿಕೆಯ ಆರಂಭವನ್ನು ಗುರುತಿಸಿದೆ, ಅದರ ಮೂಲಕ ಕ್ರಿಸ್ತನು ತನ್ನ ರಾಜ್ಯವನ್ನು ವಿಸ್ತರಿಸುತ್ತಾನೆ. ಆದ್ದರಿಂದ, ಒಡೆದ

ಮುದ್ರೆಗಳು ಸುವಾರ್ತೆ ಸಾರುವುದನ್ನು ಮತ್ತು ಅದನ್ನು ತಿರಸ್ಕರಿಸುವುದರ ಪರಿಣಾಮಗಳನ್ನು ಸೂಚಿಸುತ್ತದೆ. ಏಳನೇ ಮತ್ತು ಕೊನೆಯ ಮುದ್ರೆಯನ್ನು ಬಿಚ್ಚುವುದರಿಂದ ಪ್ರಪಂಚದ ಇತಿಹಾಸದ ಮುಕ್ತಾಯಕ್ಕೆ ನಮ್ಮನ್ನು ತರುತ್ತದೆ.

ಪ್ರಕಟನೆ 3:21 ನಮಗೆ ಏಳು ಮುದ್ರೆಗಳ ಅರ್ಥಕ್ಕೆ ಕೀಲಿಕೈಯನ್ನು ನೀಡುತ್ತದೆ: "ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು. ಅಧ್ಯಾಯ 4 ಮತ್ತು 5 ನಮ್ಮ ಪರಲೋಕ ಮಹಾಯಾಜಕನಾಗಲು ಮತ್ತು ಸುರುಳಿಯನ್ನು ಬಿಚ್ಚಲು, ಕಲ್ವಾರಿಯ ಮೇಲೆ ಆತನು ಮಾಡಿದ ತ್ಯಾಗದ ಪರಿಣಾಮದಿಂದ ಕ್ರಿಸ್ತನು ಜಯಹೊಂದಿರುವುದನ್ನು ಮತ್ತು ಆತನ ಯೋಗ್ಯತೆಯನ್ನು ಹೇಳುತ್ತದೆ. 7ನೇ ಅಧ್ಯಾಯದ ಕೊನೆಯ ವಚನವು ಜಯಹೊಂದಿದವರು ಕ್ರಿಸ್ತನ ಸಿಂಹಾಸನದ ಮುಂದೆ ಇರುವರೆಂದು ವಿವರಿಸುತ್ತದೆ. ಹೀಗಾಗಿ, ಅಧ್ಯಾಯ 6 ರಲ್ಲಿ ದೇವರ ಜನರನ್ನು ಯೇಸುವಿನ ಸಿಂಹಾಸನವನ್ನು ಹಂಚಿಕೊಳ್ಳುವ ಸಲುವಾಗಿ ಜಯಹೊಂದುವ ಪ್ರಕ್ರಿಯೆಯಲ್ಲಿದ್ದಾರೆ.

**ಫೆಬ್ರವರಿ 7, ಸಬ್ಬತ್ತಿಗಾಗಿ ತಯಾರಾಗಲು ಈ ವಾರದ ಪಾಠವನ್ನು ಅಧ್ಯಯನ ಮಾಡಿ.**

**ಭಾನುವಾರ** **ಜನವರಿ 27**

## ಮೊದಲ ಮುದ್ರೆಯನ್ನು ತೆರೆಯುವುದು

ಪ್ರಕಟನೆ 6:1–8 ಅದರ ಜೊತೆಗೆ ಯಾಜಕಕಾಂಡ 26:21–26 ಮತ್ತು ಮತ್ತಾಯ 24:1–14 ಓದಿ. ಈ ವಾಕ್ಯದಲ್ಲಿನ ಸಾಮಾನ್ಯ ಪ್ರಧಾನ ಪದಗಳನ್ನು ಗಮನಿಸಿ. ಈ ಸಮಾನಾಂತರಗಳ ಆಧಾರದ ಮೇಲೆ ಮೊದಲ ನಾಲ್ಕು ಮುದ್ರೆಗಳ ಅರ್ಥದ ಬಗ್ಗೆ ನೀವು ಏನು ಕಲಿಯುತ್ತೀರಿ?

ಏಳು ಮುದ್ರೆಗಳ ಘಟನೆಗಳನ್ನು ಕತ್ತಿ, ಕ್ಷಾಮ, ವ್ಯಾಧಿ ಮತ್ತು ದುಷ್ಟಮೃಗಗಳು ಪರಿಭಾಷೆಯಲ್ಲಿ ನಿರ್ದಿಷ್ಟಪಡಿಸಿದ ಹಳೆಯ ಒಡಂಬಡಿಕೆಯ ಒಪ್ಪಂದ ಶಾಪದ

ಸನ್ನಿವೇಶದಲ್ಲಿ ಅರ್ಥಮಾಡಿಕೊಳ್ಳಲೇಬೇಕು. ಯಾಜಕಕಾಂಡ (26:21–26). ಯೆಹೆಜ್ಕೇಲನು ಅವುಗಳನ್ನು ದೇವರ "ನಾಲ್ಕು ತೀವ್ರವಾದ ತೀರ್ಪುಗಳು" ಎಂದು ಕರೆಯುತ್ತಾನೆ. ಅವು ಶಿಸ್ತಿನ ತೀರ್ಪುಗಳಾಗಿದ್ದು ದೇವರು, ಆತನ ಜನರನ್ನು ಅವರ ಆಧ್ಯಾತ್ಮಿಕ ಸ್ಥಿತಿಯನ್ನು ಜಾಗೃತಗೊಳಿಸುವಂತೆ ಪ್ರಯತ್ನಿಸಿದಾಗ, ಅವರು ಒಡಂಬಡಿಕೆಗೆ ವಿಶ್ವಾಸದ್ರೋಹಿಗಳಿದಾಗ ಅವರನ್ನು ಶಿಕ್ಷಿಸಿದನು. ಇದೇ ರೀತಿಯಲ್ಲಿ, ನಾಲ್ಕು ಕುದುರೆ ಸವಾರರು (ರಾವುತರು) ಅಂದರೆ ಅವರು ಯೇಸುವಿನ ಹಿಂತಿರುವಿಕೆಯನ್ನು ಎದುರು ನೋಡುತ್ತಿರಲು ದೇವರು ತನ್ನ ಜನರನ್ನು ಎಚ್ಚರಗೊಳಿಸಲು ಇದನ್ನು ಉಪಯೋಗಿಸುತ್ತಾನೆ.

ಅಲ್ಲಿಯೂ ಸಹ ಮೊದಲ ನಾಲ್ಕು ಮುದ್ರೆಗಳ ನಡುವೆ ನಿಕಟ ಸಮಾನಾಂತರಗಳಿದ್ದವು ಮತ್ತು ಮತ್ತಾಯ 24:4–14; ಲೋಕದಲ್ಲಿ ಏನಾಗಬಹುದು ಎಂದು ಯೇಸು ವಿವರಿಸಿದ್ದಾರೆ. ನಾಲ್ಕು ಕುದುರೆಗಳು ಅಂದರೆ ದೇವರು ಈ ಲೋಕವು. ಅವರ ಮನೆ ಅಲ್ಲ ಎಂದು ನೆನಪಿಸುವ ಮೂಲಕ ತನ್ನ ಜನರನ್ನು ಸರಿಯಾದ ಮಾರ್ಗದಲ್ಲಿ ಇರಿಸಿಕೊಳ್ಳುವ ವಿಧಾನವಾಗಿದೆ.

ಸಾಂಕೇತಿಕವಾದರೂ, ಪ್ರಕಟನೆ 6:1,2 ವಿಜಯದ ಬಗ್ಗೆಯೂ ಕೂಡಾ. ಇದು ಪ್ರಕಟನೆ 19:11–16 ರನ್ನು ಮನಸ್ಸಿಗೆ ತರುತ್ತದೆ, ಕ್ರಿಸ್ತನು ಬಿಳಿ ಕುದುರೆಯ ಮೇಲೆ ಸವಾರಿ ಮಾಡುತ್ತಿದ್ದಾನೆ ಮತ್ತು ಅವನ ಪರಲೋಕ ದೇವದೂತರ ಸೈನ್ಯಗಳನ್ನು ನಡೆಸುವುದು ಆತನ ಜನರನ್ನು ಎರಡನೇ ಬರೋಣದಲ್ಲಿ ವಿಮೋಚಿಸುವ ಚಿತ್ರಣವಾಗಿದೆ. ಶುದ್ಧತೆಯ ಸಂಕೇತವಾಗಿ, ಬಿಳಿ ಬಣ್ಣವು ಕ್ರಿಸ್ತನ ಮತ್ತು ಅವನ ಹಿಂಬಾಲಕರೊಂದಿಗೆ ನಿಯಮಿತವಾಗಿ ಸಂಬಂಧಿಸಿದೆ. ಕುದುರೆ ಮೇಲೆ ಬಿಲ್ಲು ಹಿಡಿದು ಸವಾರಿ ಮಾಡುವವನಿಗೆ ಕಿರೀಟವನ್ನು ಕೊಡಲಾಗಿದೆ (ಪ್ರಕಟನೆ 6:2). ಕುದುರೆ ಮೇಲೆ ತನ್ನ ಕೈಯಲ್ಲಿ ಬಿಲ್ಲನ್ನು ಹಿಡಿದು ಸವಾರಿ ಮಾಡುವ ಚಿತ್ರಣವನ್ನು ಉಂಟುಮಾಡುತ್ತದೆ (ಹಬಕ್ಕೂಕನು 3:8–13; ಕೀರ್ತನೆಗಳು 45:4,5). ಕಿರೀಟಕ್ಕೆ ಗ್ರೀಕ್ ಪದ (ಪ್ರಕಟನೆ 6:2) ಸ್ಟೆಫನೋಸ್‌ನು ಕಿರೀಟ ಧರಿಸುವ ಸವಾರಿಗಾರ, ಇದು ಜಯದ ಕಿರೀಟ (ಪ್ರಕಟನೆ 2:10, ಪ್ರಕಟನೆ 3:11). ಈ ಸವಾರ ಜಯಶಾಲಿಯಾಗಿ ಮುಂದಕ್ಕೆ ಹೋಗಿ

ವಶಪಡಿಸಿಕೊಳ್ಳುವುದು ಮತ್ತು ಜಯಿಸುವುದು.

ಮೊದಲನೇ ಮುದ್ರೆಯ ದೃಶ್ಯವು ಪಂಚಾಶತ್ತಮದಲ್ಲಿ ಶಕ್ತಿಯುತವಾಗಿ ಪ್ರಾರಂಭವಾದ ಸುವಾರ್ತೆ ಪ್ರಸರಣದ ಮೂಲಕ, ಕ್ರಿಸ್ತನು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲಾರಂಭಿಸಿದನು. ಕ್ರಿಸ್ತನು ಮಹಿಮೆಯಲ್ಲಿ ಬರುವ ಅಂತಿಮ ವಿಜಯದ ಮುಂಚಿತವಾಗಿ ಯೇಸುವಿನ ಹಿಂಬಾಲಕರಾಗಲು ಇನ್ನೂ ಅನೇಕ ಪ್ರದೇಶಗಳನ್ನು ಗೆಲ್ಲಲುಬೇಕು ಮತ್ತು ಇನ್ನೂ ಹಿಂಬಾಲಕರಾಗಲು ಅನೇಕ ಜನರಿದ್ದಾರೆ.

ಪ್ರವಾದನೆಯಲ್ಲಿ ಮೊದಲನೇ ಮುದ್ರೆಯ ದೃಶ್ಯವು ಎಫೆಸದಲ್ಲಿರುವ ಸಭೆಗೆ ಸಂದೇಶವನ್ನು ಸೂಚಿಸುತ್ತದೆ; ಇದು ಮೊದಲ ಶತಮಾನದ ಅಪೋಸ್ತಲರ ಅವಧಿಯನ್ನು ವಿವರಿಸುತ್ತದೆ. ಈ ಅವಧಿಯಲ್ಲಿ ಸುವಾರ್ತೆ ವಿಶ್ವದಾದ್ಯಂತ ವೇಗವಾಗಿ ಹರಡುತ್ತದೆ (ಕೊಲೊಸ್ಸೆದವರಿಗೆ 1:23).

ಕ್ರಿಸ್ತನಲ್ಲಿ ನಾವು ನಮ್ಮ ಸನ್ನಿವೇಶಗಳ ಹೊರತಾಗಿಯೂ ಗೆಲ್ಲುವ ಬದಿಯಲ್ಲಿರುವೆವು ಎಂದು ನಾವು ಯಾವಾಗಲೂ ನೆನಪಿನಲ್ಲಿಡಬೇಕು ಏಕೆ?

**ಸೋಮವಾರ** **ಜನವರಿ 28**

## ಎರಡನೇ ಮತ್ತು ಮೂರನೇ ಮುದ್ರೆಗಳು

ಪ್ರಕಟನೆ 6:3,4 ಓದಿ. ಕೆಂಪು ಕುದುರೆ ಮತ್ತು ಸವಾರನ ವಿವರಣೆ ಆಧಾರದ ಮೇಲೆ, ಸುವಾರ್ತೆಗೆ ಸಂಬಂಧಿಸಿದಂತೆ ಇಲ್ಲಿ ಏನು ಮಾತನಾಡಲಾಗಿದೆ?

ಕೆಂಪು ರಕ್ತದ ಬಣ್ಣವಾಗಿದೆ. ಸವಾರ ದೊಡ್ಡ ಖಡ್ಗವನ್ನು ಹೊಂದಿದ್ದು, ಭೂಮಿಯಿಂದ ಶಾಂತಿಯನ್ನು ತೆಗೆದುಕೊಳ್ಳಲು ಅವಕಾಶ ನೀಡಲಾಗುತ್ತದೆ, ಅದು ಜನರು ಒಬ್ಬರಿಗೊಬ್ಬರು ಕೊಲ್ಲಲು ದಾರಿಯಾಗುತ್ತದೆ (ಮತ್ತಾಯ 24:6).

ಎರಡನೇಯ ಮುದ್ರೆಯು ಸುವಾರ್ತೆಯನ್ನು ತಿರಸ್ಕರಿಸುವ ಪರಿಣಾಮಗಳನ್ನು ವಿವರಿಸುತ್ತದೆ, ಇದು ಎರಡನೇ ಶತಮಾನದಲ್ಲಿ ಪ್ರಾರಂಭವಾಗುತ್ತದೆ. ಕ್ರಿಸ್ತನು ಸುವಾರ್ತೆ ಸಾರುವ ಮೂಲಕ ಆತ್ಮೀಕ ಯುದ್ಧವನ್ನು ಮಾಡುವಂತೆ, ದುಷ್ಟಶಕ್ತಿಗಳು ಬಲವಾದ ಪ್ರತಿರೋಧವನ್ನು ನೀಡುತ್ತವೆ. ಅನಿವಾರ್ಯವಾಗಿ, ಹಿಂಸೆ ಮುಂದುವರೆಯುವುದು. ಸವಾರ ಕೊಲೆ ಮಾಡುವುದಿಲ್ಲ. ಬದಲಾಗಿ, ಅವರು

ಭೂಮಿಯಿಂದ ಶಾಂತಿಯನ್ನು ತೆಗೆದುಕೊಳ್ಳುತ್ತಾರೆ. ಪರಿಣಾಮವಾಗಿ, ಹಿಂಸೆಯು ಅನಿವಾರ್ಯವಾಗಿ ಮುಂದುವರೆಯುತ್ತದೆ (ಮತ್ತಾಯ 10:34 ನೋಡಿರಿ).

ಪ್ರಕಟನೆ 6:5,6 ಜೊತೆಗೆ ಯಾಜಕಕಾಂಡ 26:26 ಮತ್ತು ಯೆಹೆಜ್ಕೇಲನು 4:16. ಕಪ್ಪು ಕುದುರೆ ಮತ್ತು ಸವಾರನ ವಿವರಣೆ ಆಧಾರದ ಮೇಲೆ, ಸುವಾರ್ತೆಯ ಬೋಧನೆಗೆ ಸಂಬಂಧಿಸಿದ ಯಾವ ವಾಸ್ತವವನ್ನು ಇಲ್ಲಿ ಉಲ್ಲೇಖಿಸಲಾಗಿದೆ?

ಕಪ್ಪು ಕುದುರೆ ಮೇಲಿರುವ ಸವಾರ ಆಹಾರವನ್ನು ತೂಕಹಾಕಲು ತಕ್ಕಡಿಯನ್ನು ಹಿಡಿದಿದ್ದಾನೆ. ಒಂದು ಘೋಷಣೆ ಮಾಡಲ್ಪಟ್ಟಿದೆ "ಅದು ರೂಪಾಯಿಗೆ ಒಂದು ಸೇರು ಗೋದಿ; ರೂಪಾಯಿಗೆ ಮೂರು ಸೇರು ಜವೆ ಗೋದಿ" (ಪ್ರಕಟನೆ 6:6). ವಿಶ್ವದ ಆ ಭಾಗದಲ್ಲಿ ಧಾನ್ಯ, ತೈಲ ಮತ್ತು ದ್ರಾಕ್ಷೆ ಜೀವನದ ಮೂಲಭೂತ ಅಗತ್ಯತೆಗಳಾಗಿವೆ (ಧರ್ಮೋಪದೇಶಕಾಂಡ 11:14). ರೊಟ್ಟಿಯನ್ನು ಸೇವಿಸಲು ದೊಡ್ಡ ಕ್ಷಾಮವನ್ನು ಮತ್ತು ಕೊರತೆಯನ್ನು ಸೂಚಿಸುವ ಧಾನ್ಯವನ್ನು ಎಚ್ಚರಿಕೆಯಿಂದ ತೂಕ ಮಾಡಲಾಗುವುದು (ಯಾಜಕಕಾಂಡ 26:26; ಯೆಹೆಜ್ಕೇಲನು 4:16). ಯೋಹಾನನ ಕಾಲದಲ್ಲಿ, ಒಂದು ಪಾವಲಿ ಒಂದು ದಿನಗೂಲಿಯಾಗಿದೆ (ಮತ್ತಾಯ 20:2). ಸಾಮಾನ್ಯ ಸಂದರ್ಭಗಳಲ್ಲಿ ದಿನನಿತ್ಯದ ವೇತನವು ಆ ದಿನದಂದು ಕುಟುಂಬದ ಎಲ್ಲಾ ಅವಶ್ಯಕತೆಗಳನ್ನು ಖರೀದಿಸುತ್ತದೆ. ಹೇಗಾದರೂ, ಕ್ಷಾಮವು ಆಹಾರದ ಸಾಮಾನ್ಯ ಬೆಲೆಯನ್ನು ಅಗಾಧವಾಗಿ ಹೆಚ್ಚಿಸುತ್ತದೆ. ಮೂರನೇ ಮುದ್ರೆಯ ದೃಶ್ಯದಲ್ಲಿ ಕೇವಲ ಒಬ್ಬ ವ್ಯಕ್ತಿಗೆ ಮಾತ್ರ ಸಾಕಾಗುವಷ್ಟು ಆಹಾರವನ್ನು ಕೊಳ್ಳಲು ಇಡೀ ದಿನದ ಕೆಲಸವನ್ನು ತೆಗೆದುಕೊಳ್ಳುತ್ತದೆ. ಒಂದು ಸಣ್ಣ ಕುಟುಂಬದ ಪೋಷಣೆಗೆ, ಮೂರು ಸೇರು ಬಾರ್ಲಿಯನ್ನು ಖರೀದಿಸಲು ಒಂದು ದಿನದ ವೇತನ ಉಪಯೋಗಿಸಲಾಗಿದೆ, ಬಡವರಿಗೆ ಅಗ್ಗದ ಒರಟಾದ ಆಹಾರ.

ಸುವಾರ್ತೆಯನ್ನು ತಿರಸ್ಕರಿಸುವ ಮತ್ತಷ್ಟು ಪರಿಣಾಮಗಳಿಗೆ ಮೂರನೇ ಮುದ್ರೆಯ ದೃಶ್ಯವು ನಾಲ್ಕನೇ ಶತಮಾನದಲ್ಲಿ ಪ್ರಾರಂಭವಾಯಿತು. ಸಭೆ ರಾಜಕೀಯ ಶಕ್ತಿಯನ್ನು ಪಡೆದುಕೊಂಡಿತು. ಬಿಳಿ ಕುದುರೆ ಸುವಾರ್ತೆಯ ಉಪದೇಶವನ್ನು ಪ್ರತಿನಿಧಿಸುತ್ತದೆ. ಕಪ್ಪು ಕುದುರೆ ಸುವಾರ್ತೆ ಅನುಪಸ್ಥಿತಿಯಲ್ಲಿ

ಮತ್ತು ಮಾನವ ಸಂಪ್ರದಾಯಗಳ ಮೇಲೆ ಅವಲಂಬನೆಯನ್ನು ಸೂಚಿಸುತ್ತದೆ. ಸತ್ಯವೇದದಲ್ಲಿ ಧಾನ್ಯವು ದೇವರ ವಾಕ್ಯವನ್ನು ಸಂಕೇತಿಸುತ್ತದೆ (ಲೂಕ 11). ಅಮೋಸನು ಪ್ರವಾದಿಸಿದಂತೆ ಸುವಾರ್ತೆ ನಿರಾಕರಣೆ ಅನಿವಾರ್ಯವಾಗಿ ದೇವರ ವಾಕ್ಯದ ಕ್ಷಾಮ ಫಲಿತಾಂಶಗಳಾಗುತ್ತದೆ (ಅಮೋಸ 8:11–13).

**ಮಂಗಳವಾರ** **ಜನವರಿ 29**

## ನಾಲ್ಕನೇ ಮುದ್ರೆಯ ದೃಶ್ಯ

ಪ್ರಕಟನೆ 6:7,8 ಓದಿ. ಯಾವ ದೃಶ್ಯವನ್ನು ಇಲ್ಲಿ ಚಿತ್ರಿಸಲಾಗಿದೆ? ಈ ದೃಶ್ಯ ಹಿಂದಿನ ದೃಶ್ಯಕ್ಕೆ ಹೇಗೆ ಸಂಬಂಧಿಸಿದೆ?

ನಾಲ್ಕನೇ ಮುದ್ರೆಯ ಕುದುರೆ ಬಣ್ಣವು ಗ್ರೀಕ್ ಪದ ಕ್ಲೋರೋಸ್‌ನೊಂದಿಗೆ ವ್ಯಕ್ತವಾಗುತ್ತದೆ. ಇದು ಕೊಳೆತ ಶವದ ಬೂದು ಬಣ್ಣವಾಗಿದೆ. ಸವಾರನ ಹೆಸರು ಸಾವು; ಅಷ್ಟರಲ್ಲಿ, ಸತ್ತವರ ಸ್ಥಳವಾದ ಹೇಡ್ಸ್ (ಪಾತಾಳ) ಅವನಿಗೆ ಜೊತೆಗೂಡುತ್ತಾನೆ. ಈ ಇಬ್ಬರು ಕತ್ತಿ, ಹಸಿವು, ಮರಣ ಮತ್ತು ಕ್ರೂರಮೃಗದಿಂದ ಭೂಮಿಯ ನಾಲ್ಕನೇ ಒಂದು ಭಾಗದಲ್ಲಿ ಜನರನ್ನು ನಾಶಮಾಡಲು ಅನುಮತಿಸಲಾಗಿದೆ (ಮತ್ತಾಯ 24:7,8). ಮರಣ ಮತ್ತು ಹೇಡ್ಸ್ (ಪಾತಾಳ)ನ ಶಕ್ತಿಯು ಬಹಳ ಸೀಮಿತವಾಗಿದೆ ಎಂಬುದು ಒಳ್ಳೆಯ ಸುದ್ದಿ; ಅವರಿಗೆ ಭೂಮಿಯ ನಾಲ್ಕನೇ ಒಂದು ಭಾಗಕ್ಕೆ ಮಾತ್ರ ಅಧಿಕಾರ ನೀಡಲಾಗುತ್ತದೆ. ಯೇಸು ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿವೆಯೆಂದು ನಮಗೆ ಭರವಸೆ ನೀಡುತ್ತಾರೆ (ಪ್ರಕಟನೆ 1:18 ನೋಡಿ).

ಮತ್ತೊಮ್ಮೆ ಪ್ರಕಟನೆ 2 ರಲ್ಲಿ ಎಫೆಸ, ಸ್ಮುರ್ನ, ಪೆರ್ಗಮ ಮತ್ತು ಥುವತೈರ ಸಭೆಗಳಿಗೆ ಸಂಬಂಧಿಸಿದ ಸಂದೇಶಗಳ ಸಾರಾಂಶಗಳು. ಮೊದಲ ನಾಲ್ಕು ಮುದ್ರೆಗಳ ತೆರೆಯುವಿಕೆಯ ದೃಶ್ಯಗಳೊಂದಿಗೆ ಆ ಸಭೆಗಳಲ್ಲಿನ ಪರಿಸ್ಥಿತಿಯನ್ನು ಹೋಲಿಕೆ ಮಾಡಿ ನೀವು ಅವುಗಳ ಮಧ್ಯೆ ಸಮಾನಾಂತರವಾಗಿರುವ ಏನು ಗಮನಿಸುತ್ತೀರಿ?

ಏಳು ಮುದ್ರೆಗಳ ದೃಶ್ಯವು ಸಭೆ ಭವಿಷ್ಯವನ್ನು ಚಿತ್ರಿಸುತ್ತದೆ. ಏಳು ಸಭೆಗಳಂತೆಯೇ, ಮುದ್ರೆಗಳು ಕ್ರೈಸ್ತ ಇತಿಹಾಸದಲ್ಲಿ ವಿಭಿನ್ನ ಅವಧಿಗಳಿಗೆ ಸಂಬಂಧಿಸಿವೆ. ಅಪೋಸ್ತಲರ

ಸಮಯದಲ್ಲಿ ಸುವಾರ್ತೆಯು ವೇಗವಾಗಿ ವಿಶ್ವದಾದ್ಯಂತ ಹರಡಿತು. ಈ ವಿಸ್ತರಣೆಯು ರೋಮನ್ ಸಾಮ್ರಾಜ್ಯದಲ್ಲಿ ಹಿಂಸೆಯ ಅವಧಿಯನ್ನು ಅನುಸರಿಸಿತು. ಮೊದಲನೇ ಶತಮಾನದ ಅಂತ್ಯದಿಂದ ನಾಲ್ಕನೇ ಶತಮಾನದ ಪ್ರಾರಂಭದವರೆಗೂ, ಎರಡನೇ ಮುದ್ರೆ ದೃಶ್ಯದಲ್ಲಿ ಚಿತ್ರಿಸಲಾಗಿದೆ. ನಾಲ್ಕು ಮತ್ತು ಐದನೇ ಶತಮಾನಗಳಲ್ಲಿ ಸಂಧಾನ ಮಾಡಿಕೊಳ್ಳುವ ಸಮಯವನ್ನು ಮೂರನೇ ಮುದ್ರೆ ತೋರಿಸುತ್ತದೆ. ಸತ್ಯವೇದ ಮತ್ತು ಅದರ ಸತ್ಯಗಳ ಕೊರತೆಯಿಂದ ಉಂಟಾದ ಆತ್ಮೀಕ ಕ್ಷಾಮವು "ಅಂಧಕಾರದ ಯುಗಗಳಿಗೆ" (ಡಾರ್ಕ್ ಏಜಸ್) ಕಾರಣವಾಯಿತು. ನಾಲ್ಕನೇ ಮುದ್ರೆಯು ಕ್ರೈಸ್ತಧರ್ಮವನ್ನು ಸುಮಾರು ಸಾವಿರ ವರ್ಷಗಳವರೆಗೆ ಆಧ್ಯಾತ್ಮಿಕ ಮರಣದ ಗುಣಲಕ್ಷಣವನ್ನು ಸಮಂಜಸವಾಗಿ ವಿವರಿಸುತ್ತದೆ.

ಮೂರನೇ ಮುದ್ರೆಯ ಉಪದ್ರವದ ಕ್ಷಾಮದಿಂದ "ಎಣ್ಣೆ ಮತ್ತು ದ್ರಾಕ್ಷಿ"ಗೆ ಪರಿಣಾಮ ಬೀರುವುದಿಲ್ಲ ಎಂದು ಪ್ರಕಟನೆ 6:6 ರಲ್ಲಿ ಹೇಳುತ್ತದೆ. ಎಣ್ಣೆ ಪವಿತ್ರ ಆತ್ಮನನ್ನು (1 ಸಮುವೇಲ 16:13, ಅಪೋಸ್ತಲರ ಕೃತ್ಯಗಳು 10:38) ಮತ್ತು ದ್ರಾಕ್ಷಿ ಯೇಸುಕ್ರಿಸ್ತನಲ್ಲಿ ಹೊಸ ರಕ್ಷಣೆಯನ್ನು (ಮಾರ್ಕ 2:22) ಸಂಕೇತಿಸುತ್ತದೆ. ಈ ಚಿಹ್ನೆಗಳ ಅರ್ಥವೇನೆಂದರೆ, ದೇವರ ವಾಕ್ಯವು ವಿರಳವಾಗಿದ್ದರೂ ಸಹ, ಪರಿಶುದ್ಧ ಆತ್ಮವು ಇನ್ನೂ ಕೆಲಸದಲ್ಲಿದೆ ಮತ್ತು ಸತ್ಯವನ್ನು ಹುಡುಕುವ ಎಲ್ಲರಿಗೂ ರಕ್ಷಣೆ ಇನ್ನೂ ಲಭ್ಯವಿದೆಯೋ ಎಂಬ ಬಗ್ಗೆ ನಮಗೇನು ಹೇಳುತ್ತದೆ?

**ಬುಧವಾರ** **ಜನವರಿ 30**

## ಐದನೇ ಮುದ್ರೆಯ ಪ್ರಾರಂಭ

ಪ್ರಕಟನೆ 6:9, 10 ಓದಿ. ಇಲ್ಲಿ ಏನು ನಡೆಯುತ್ತಿದೆ?

ಸತ್ಯವೇದದಲ್ಲಿ "ಆತ್ಮ" ಎಂಬ ಪದವು ಇಡೀ ವ್ಯಕ್ತಿಯನ್ನು ಸೂಚಿಸುತ್ತದೆ (ಆದಿಕಾಂಡ 2:7). ದೇವರ ನಂಬಿಗಸ್ತ ಹುತಾತ್ಮರು ಮತ್ತು ಹಿಂಸೆಗೊಳಗಾದ ಜನರನ್ನು ಭೂಲೋಕ ದೇವದರ್ಶನ ಗುಡಾರದ ಯಜ್ಞವೇದಿಯ ಬುಡಕ್ಕೆ ಹೊಯ್ಯಬೇಕಾದ ತ್ಯಾಗದ ರಕ್ತದ ಪರಿಭಾಷೆಯಲ್ಲಿ ಚಿತ್ರಿಸಲಾಗಿದೆ (ವಿಮೋಚನ ಕಾಂಡ 29:12; ಯಾಜಕಕಾಂಡ 4:7). ಅವರು ಸುವಾರ್ತೆಗೆ

ನಂಬಿಗಸ್ತರಾಗಿದ್ದರಿಂದ ದೇವಜನರು ಅನ್ಯಾಯ ಮತ್ತು ಮರಣವನ್ನು ಅನುಭವಿಸಿದ್ದಾರೆ. ಅವರು ದೇವರ ಕಡೆಗೆ ಮೊರೆಯಿಡುತ್ತಾರೆ, ಅವರನ್ನು ಹೆಜ್ಜೆ ಹಾಕುವಂತೆ ಮತ್ತು ಪ್ರತಿಪಾದಿಸುವಂತೆ ಕೇಳುತ್ತಾರೆ. ಈ ವಾಕ್ಯಗಳು ಭೂಮಿಯ ಮೇಲೆ ಮಾಡಿದ ಅನ್ಯಾಯಕ್ಕೆ ಸಂಬಂಧಿಸಿದೆ; ಅವರು ಸತ್ತವರ ಸ್ಥಿತಿಯ ಕುರಿತು ಏನು ಹೇಳುತ್ತಿಲ್ಲ. ಎಲ್ಲಾದರ ನಂತರ, ಈ ಜನರು ಪರಲೋಕದ ಅತ್ಯಾನಂದವನ್ನು ಅನುಭೋಗಿಸುವಂತೆ ಕಾಣುತ್ತಿಲ್ಲ.

ಪ್ರಕಟನೆ 6:11 ಜೊತೆಗೆ ಧರ್ಮೋಪದೇಶಕಾಂಡ 32:43 ಮತ್ತು ಕೀರ್ತನೆ 79:10 ಓದಿ. ಹುತಾತ್ಮರಾದ ದೇವಜನರ ಪ್ರಾರ್ಥನೆಗೆ ಪರಲೋಕದ ಪ್ರತಿಕ್ರಿಯೆ ಏನು?

ಹುತಾತ್ಮರಾದ ಸಂತರಿಗೆ ಕ್ರಿಸ್ತನ ನೀತಿಯನ್ನು ಪ್ರತಿನಿಧಿಸುವ ಬಿಳಿ ನಿಲುವಂಗಿಗಳನ್ನು ನೀಡಲಾಗಿದೆ. ಇದು ಅವರ ಪ್ರತಿಪಾದಿಸುವುದಕ್ಕೆ ಕಾರಣವಾಗುತ್ತದೆ– ತನ್ನ ಕೃಪೆಯನ್ನು ಅಂಗೀಕರಿಸುವವರಿಗೆ ಆತನ ಉಡುಗೊರೆ (ಪ್ರಕಟನೆ 3:5, ಪ್ರಕಟನೆ 19:8). ಆಮೇಲೆ, ಅವರ ಸಹೋದರರು ಒಂದೇ ಅನುಭವದ ಮೂಲಕ ಹಾದು ಹೋಗುವ ತನಕ ಅವರು ವಿಶ್ರಾಂತಿ ಪಡೆಯಬೇಕೆಂದು ಅವರಿಗೆ ತಿಳಿಸಲಾಯಿತು. ಪ್ರಕಟನೆ 6:11 ರಲ್ಲಿ ಗ್ರೀಕ್ ವಾಕ್ಯವು ಪದ ಸಂಖ್ಯೆಯನ್ನು ಹೊಂದಿಲ್ಲ ಎಂದು ಗಮನಿಸುವುದು ಬಹಳ ಪ್ರಾಮುಖ್ಯ. ಪ್ರಕಟನೆಯು ಕ್ರಿಸ್ತನು ತಿರುಗಿ ಬರುವ ಮೊದಲು ಹುತಾತ್ಮರಾಗಿ ತಲುಪಿದನಂತರ ಸಂಖ್ಯೆ ಬಗ್ಗೆ ಮಾತನಾಡುವುದಿಲ್ಲ. ಆದರೆ ಅವರ ನಡತೆಯ ಪರಿಪೂರ್ಣತೆ ವಿಷಯದಲ್ಲಿ ದೇವಜನರು ಕ್ರಿಸ್ತನ ನೀತಿಯ ನಿಲುವಂಗಿಯಿಂದ ಪರಿಪೂರ್ಣಗೊಂಡರು ಅವರ ಸ್ವಂತ ಅರ್ಹತೆಯಿಂದಲ್ಲ (ಪ್ರಕಟನೆ 7:9,10). ರಕ್ತಸಾಕ್ಷಿಯಾದ ಸಂತರು ಕ್ರಿಸ್ತನ ಎರಡನೇ ಬರೋಣ ಮತ್ತು ಸಾವಿರ ವರುಷಗಳ (ಮಿಲೆನಿಯಮ್) ತನಕ ಪುನರುತ್ಥಾನಗೊಳ್ಳುವುದಿಲ್ಲ ಮತ್ತು ಪ್ರತಿಪಾದಿಸುವುದಿಲ್ಲ (ಪ್ರಕಟನೆ 20:4).

ಐದನೇ ಮುದ್ರೆಯ ದೃಶ್ಯವು ಐತಿಹಾಸಿಕ ಮಹತ್ವಕಾಲದವರೆಗೂ ಅನ್ವಯಿಸುತ್ತದೆ ಮತ್ತು ಸುಧಾರಣೆಯನ್ನು ಹಿಂಬಾಲಿಸುವುದು, ಆ ಸಮಯದಲ್ಲಿ

ಸಹಸ್ರಾರು ಜನರು ರಕ್ತಸಾಕ್ಷಿಗಳಾದರು ಯಾಕೆಂದರೆ ಅವರು ನಂಬಿಗಸ್ತರಾದ ಕಾರಣ (ಮತ್ತಾಯ 24:21). ಇದು ಇತಿಹಾಸದುದ್ದಕ್ಕೂ ದೇವರ ಜನರ ಸಂಕಷ್ಟದ ಅನುಭವವನ್ನು ಹೆಬೇಲನ ಸಮಯದಿಂದಲೂ (ಆದಿಕಾಂಡ 4:10) ದೇವರು "ತನ್ನ ಸೇವಕರ ರಕ್ತವನ್ನು" ಅಂತಿಮವಾಗಿ ಸೇಡು ತೀರಿಸಿಕೊಳ್ಳುವ ಸಮಯದವರೆಗೂ ಇದು ಮನಸ್ಸಿಗೆ ಬರುತ್ತದೆ (ಪ್ರಕಟನೆ 19:2).

ಇತಿಹಾಸದುದ್ದಕ್ಕೂ ದೇವಜನರ ಸಂಕಷ್ಟ ಕೂಗಾದ "ಓ ಕರ್ತನೇ, ಎಷ್ಟು ಕಾಲ" ಎಂಬುದಾಗಿದೆ. ಈ ಜೀವನದಲ್ಲಿ ನ್ಯಾಯದ ಕೊರತೆಯೊಂದಿಗೆ ಯಾರು ಎಂದಿಗೂ ಹೋರಾಟ ಮಾಡಲಿಲ್ಲ? ಐದನೇ ಮುದ್ರೆಯ ದೃಶ್ಯದಲ್ಲಿ ನೀವು ಯಾವ ಸಮಾಧಾನವನ್ನು ಕಂಡುಕೊಳ್ಳುತ್ತೀರಿ, ಒಂದು ದಿನ ನ್ಯಾಯವು ನಿಜಕ್ಕೂ ನಡೆಯಲಿದೆ ಎಂದು ತಿಳಿದುಕೊಳ್ಳುವುದು ಹೇಗೆ?

**ಗುರುವಾರ** **ಜನವರಿ 31**

## ಆರನೇ ಮುದ್ರೆಯ ಪ್ರಾರಂಭ

ಐದನೆಯ ಮುದ್ರೆಯಲ್ಲಿ, ಶತ್ರು ಪ್ರಪಂಚದಲ್ಲಿ ದೇವರ ಜನರು ಅನ್ಯಾಯ ಅನುಭವಿಸುತ್ತಿರುವುದು, ದೇವರು ಅವರ ಪರವಾಗಿ ಮಧ್ಯಸ್ಥಿಕೆ ವಹಿಸಲು ಕೂಗುತ್ತಿರುವುದನ್ನು ನಾವು ನೋಡುತ್ತೇವೆ. ದೇವರು ತನ್ನ ಜನರ ಪ್ರಾರ್ಥನೆಗೆ ಉತ್ತರವಾಗಿ ಮಧ್ಯಸ್ಥಿಕೆ ವಹಿಸುವ ಸಮಯ ಬಂದಿದೆ.

ಪ್ರಕಟನೆ 6:12–14 ಜೊತೆಗೆ ಮತ್ತಾಯ 24:29,30 ಮತ್ತು 2 ಥೆಸಲೋನಿಕದವರಿಗೆ 1:7–10. ಇಲ್ಲಿ ಏನು ಪ್ರಕಟಗೊಳ್ಳುತ್ತಿದೆ?

ಆರನೆಯ ಮುದ್ರೆಯ ಕೊನೆಯ ಮೂರು ಲಕ್ಷಣಗಳು ಯೇಸುವಿನಿಂದ ಮತ್ತಾಯ 24:29,30 ರಲ್ಲಿ ಮುಂತಿಳಿಸಲ್ಪಟ್ಟಿದ್ದವು. ಅವು "ಮಹಾಕಷ್ಟ"ದ ಅಂತ್ಯದ ಸಮಯದಲ್ಲಿ (ಪ್ರಕಟನೆ 7:14). 1798 ರಲ್ಲಿ, ಎರಡನೇ ಬರೋಣದ ಮುನ್ಸೂಚನೆಯಂತೆ ಸಂಭವಿಸಬೇಕು. ಮತ್ತಾಯ 24ರಲ್ಲಿ ಕ್ರಿಸ್ತನ ಪ್ರವಾದನೆಯಂತೆ, ಸೂರ್ಯ, ಚಂದ್ರ, ನಕ್ಷತ್ರಗಳು (ಉಲ್ಕೆಗಳು) ಮತ್ತು ಆಕಾಶವು ಇಲ್ಲಿ ಅಕ್ಷರಶಃ ಇವೆ "ಹಾಗೆ" ಅಥವಾ "ಅಂತಹ" ಎಂಬ ಪದ ಬಳಕೆಯು ಒಂದು ನಿಜವಾದ

ವಿಷಯ ಅಥವಾ ಘಟನೆಯ ಚಿತ್ರವನ್ನು ವರ್ಣಿಸುತ್ತದೆ – ಸೂರ್ಯನು ಗೋಣಿ ಬಟ್ಟೆಯಂತೆ ಕಪ್ಪು ಬಣ್ಣಕ್ಕೆ ಬಂದನು, ಚಂದ್ರನು ರಕ್ತದಂತಾದನು ಮತ್ತು ಭೂಮಿಯ ಮೇಲೆ ಅಂಜೂರದ ಮರದಿಂದ ಕೊನೆಯ ಅಂಜೂರದ ಹಣ್ಣುಗಳು ಉದುರುವಂತೆ ನಕ್ಷತ್ರ ಬೀಳುತ್ತವೆ. ಪಾಶ್ಚಾತ್ಯ ಜಗತ್ತಿನಲ್ಲಿರುವ ಕ್ರೈಸ್ತರು ಯೇಸುವಿನ ಮಾತುಗಳ ನೆರವೇರಿಸುವಿಕೆಯನ್ನು ಈ ಪ್ರತಿಯೊಂದು ಚಿಹ್ನೆಗಳನ್ನು ಕ್ರಮಬದ್ಧವಾಗಿ ಗುರುತಿಸಿದ್ದಾರೆ. 1755ರಲ್ಲಿ ಲಿಸ್ಬನ್ ಭೂಕಂಪ, ಮೇ 19, 1780, ಕತ್ತಲ ದಿನ (ಪೂರ್ವ ನ್ಯೂಯಾರ್ಕ್ ಮತ್ತು ದಕ್ಷಿಣ ಇಂಗ್ಲೆಂಡ್‌ನಲ್ಲಿ ಅನುಭವವಾಗಿತ್ತು); ಮತ್ತು ನವೆಂಬರ್ 13, 1833 ರಂದು ಅಟ್ಲಾಂಟಿಕ್ ಸಮುದ್ರದ ಮೇಲೆ ಅದ್ಭುತವಾದ ಉಲ್ಕೆಗಳ ಮಳೆ ಸುರಿಯುವಿಕೆ ಪ್ರಕಟನೆ 6:15–17 ರ ಪ್ರವಾದನೆಯ ನೆರವೇರಿಕೆ, ಪುನರುಜ್ಜೀವಿತ ಸರಣಿಯನ್ನು ಮತ್ತು ಕ್ರಿಸ್ತನ ಎರಡನೇ ಬರೋಣ ಸಮೀಪದಲ್ಲಿದೆ ಎಂದು ಅರಿತುಕೊಳ್ಳಲು ಕಾರಣವಾಯಿತು.

ಪ್ರಕಟನೆ 6:15–17 ಓದಿ. ಯೆಶಾಯ 2:19, ಹೋಶೇಯ 10:8 ಮತ್ತು ಲೂಕ 23:30ನ್ನು ಸಹ ಓದಿ. ಕ್ರಿಸ್ತನ ಎರಡನೇ ಬರೋಣದಲ್ಲಿ ಭಯದಿಂದ ದಂಗೆಯೆದ್ದ ಎಲ್ಲಾ ಜೀವನ ವೃತ್ತಿ ಜನರು ಗಾಬರಿಯಲ್ಲಿ ಅಡಗಿಕೊಳ್ಳುವ ದೃಶ್ಯಗಳನ್ನು ಚಿತ್ರಿಸಿದೆ. ಅವರು ಬೆಟ್ಟಗಳಿಗೂ ಬಂಡೆಗಳಿಗೂ ನಮ್ಮ ಮೇಲೆ ಬೀಳಿರಿ, "ಸಿಂಹಾಸನದ ಮೇಲೆ ಕೂತಿರುವಾತನ ಮುಖಕ್ಕೂ ಯಜ್ಞನ ಕುರಿಯಾದಾತನ ಕೋಪಕ್ಕೂ" ನಮ್ಮನ್ನು ಮರೆಮಾಡಿರಿ (ಪ್ರಕಟನೆ 6:16). ಕ್ರಿಸ್ತನು ಬರುವಂತೆ ನ್ಯಾಯಕ್ಕಾಗಿ ನ್ಯಾಯ ನಡೆಸುವ ಸಮಯ ಬಂದಿದೆ "ತನ್ನ ಪವಿತ್ರರ ಮೂಲಕ ಪ್ರಭಾವ ಹೊಂದಿದವನಾದನು" (2 ಥೆಸಲೋನಿಕದವರಿಗೆ 1:10). ಪ್ರಕಟನೆ 19:17–21ರಲ್ಲಿ ದುಷ್ಟರ ಅಂತ್ಯವನ್ನು ವಿವರಿಸಲಾಗಿದೆ.

ದುಷ್ಟರ ಭಯೋತ್ಪಾದನೆಯಿಂದ ಅಲಂಕಾರಿಕ ಪ್ರಶ್ನೆಯೊಂದಿಗೆ ದೃಶ್ಯವು ಮುಕ್ತಾಯವಾಗುತ್ತದೆ. ಅವರ ಕೋಪವು ಕಾಣಿಸುವ ಮಹಾದಿನ ಬಂದಿದೆ, ಅದರ ಮುಂದೆ ನಿಲ್ಲುವುದಕ್ಕೆ ಯಾರು ಶಕ್ತರು? (ಪ್ರಕಟನೆ 6:17; ನಹೂಮ 1:6; ಮಲಾಕಿ 3:2ನ್ನು ಸಹ ನೋಡಿ). ಪ್ರಕಟನೆ 7:4 ರಲ್ಲಿ ಪ್ರಶ್ನೆಗೆ ಉತ್ತರವನ್ನು ಕೊಡಲಾಗಿದೆ: ಆ ದಿನದಲ್ಲಿ ದೇವರ ಮುದ್ರೆ ಹೊಂದಿದ ಜನರು ನಿಲ್ಲುವವರಾಗಿದ್ದಾರೆ.

"ಆತನು ಬರುವ ದಿನವನ್ನು ಯಾರು ತಾಳಾರು?" (ಮಲಾಕಿ 3:2). ಆ ಪ್ರಶ್ನೆಗೆ ನೀವು ಹೇಗೆ ಉತ್ತರ ನೀಡುತ್ತೀರಿ ಮತ್ತು ಉತ್ತರಕ್ಕಾಗಿ ಸತ್ಯವೇದದ ಕಾರಣಗಳನ್ನು ನೀಡುವುದು ಹೇಗೆ? ನಿಮ್ಮ ಉತ್ತರವನ್ನು ಸಬ್ಬತ್ ದಿನದಂದು ತರಗತಿಗೆ ತನ್ನಿರಿ.

**ಶುಕ್ರವಾರ** **ಫೆಬ್ರವರಿ 1**

ಮುಂದಿನ ಆಲೋಚನೆ : ಎಲೆನ್ ಜಿ ವೈಟ್ "ದ ವರ್ಲ್ಡ್ಸ್ ನೀಡ್" ಪುಟಗಳು 457, 460 ಇನ್ ಟೆಸ್ಟಿಮೋನಿಸ್ ಟೂ ಮಿನಿಸ್ಟರ್ಸ್ ಆಂಡ್ ಗಾಸ್ಪೆಲ್ ವರ್ಕರ್ಸ್.

ಕ್ನೆತ್ ಎ ಸ್ಟ್ರಾಂಡ್‌ರವರು ಸೂಚಿಸಿದಂತೆ, ಏಳು ಮುದ್ರೆಗಳ ದೃಶ್ಯದ ಪ್ರಾರಂಭವು ಸಾಂಕೇತಿಕವಾಗಿ ಭೂಮಿಯಲ್ಲಿರುವ ಅವನ ಜನರಿಗೆ ದೇವರ ಕಾಳಜಿ ಮತ್ತು ಶಿಸ್ತನ್ನು ಸೂಚಿಸುತ್ತದೆ :

"ಈ ಗ್ರಂಥದಲ್ಲಿ ದೇವರು ತನ್ನ ಜನರಿಗೆ ಯಾವಾಗಲೂ ಕಾಳಜಿಯಾಗಿದ್ದಾನೆ ಎಂಬ ಭರವಸೆ ಇದೆ : ಇತಿಹಾಸದಲ್ಲಿ ಸ್ವತಃ ಅವುಗಳನ್ನು ಉಳಿಸಲು ಯಾವಾಗಲೂ ಅಸ್ತಿತ್ವದಲ್ಲಿದ್ದಾನೆ, ದೊಡ್ಡ ಅಂತ್ಯಕಾಲದ ಘಟನೆಯ ಪರಿಣಾಮ ಅವರಿಗೆ ಪೂರ್ಣವಾದ ಸಮರ್ಥನೆ ಮತ್ತು ನಿತ್ಯಜೀವನದಲ್ಲಿ ತಿಳಿದುಕೊಳ್ಳಲಾಗದಷ್ಟು ಉದಾರವಾದ ಪ್ರತಿಫಲವನ್ನು ನೀಡುತ್ತದೆ. ಪ್ರಕಟನೆ ಪುಸ್ತಕವು ಒಂದೇ ತರದ ವಿಷಯವನ್ನು ಎತ್ತಿಕೊಂಡು ಸುಂದರವಾಗಿ ವಿಸ್ತರಿಸಿದೆ. ಹೀಗೆ ಪ್ರಕಟನೆಯು ಯಾವುದೇ ವಿವಿಧ ಹೊಂದಾಣಿಕೆಯಾಗದ ಅಪೋಕ್ಯಾಲಿಪ್ಸ್ ಮೂಲಕವಲ್ಲ ಅದು ಸಾಮಾನ್ಯವಾಗಿ ಸತ್ಯವೇದ ಗ್ರಂಥದೊಂದಿಗೆ ರಚಿತವಾಗಿದೆ; ಇದು ಸತ್ಯವೇದ ಸಂದೇಶದ ತಾತ್ಪರ್ಯವನ್ನು ಮತ್ತು ಪೂರ್ಣ ಉತ್ಸಾಹದ ಅರ್ಥ ಸೂಚಿಸುತ್ತದೆ. ವಾಸ್ತವವಾಗಿ, ಪ್ರಕಟನೆ ಒತ್ತಾಯಪಡಿಸಿದಂತೆ "ಜೀವಿಸುವವನೂ" – ಮರಣ ಮತ್ತು ಸಮಾಧಿಯನ್ನು ಜಯಿಸಿದಾತನು (1:18)– ತನ್ನ ನಂಬಿಗಸ್ತ ಹಿಂಬಾಲಕರನ್ನು ಎಂದಿಗೂ ತೊರೆಯುವುದಿಲ್ಲ ಮತ್ತು ಅವರು ರಕ್ತಸಾಕ್ಷಿಗಳಾದ ಬಳಿಕ ಅವರು ವಿಜಯಶಾಲಿಯಾಗುತ್ತಾರೆ (12:11), ಅವರಿಗೆ "ಜೀವವೆಂಬ ಜಯಮಾಲೆ"ಯು ಕಾಯುತ್ತಿದೆ (2:10; 21:1–14 ಮತ್ತು 22:4

ನೋಡಿ)– ಕೆಸೆತ್ ಎ ಸ್ಟ್ರಾಂಡ್, "ಏಳು ತಲೆಗಳು : ಅವು ರೋಮನ್ ಚಕ್ರವರ್ತಿಗಳನ್ನು ಪ್ರತಿನಿಧಿಸುತ್ತದೆಯೋ? ಸಿಂಪೋಸಿಯಮ್ ಆನ್ ರೆವೆಲ್ಯೂಷನ್– ಪುಸ್ತಕ 2, ದಾನಿಯೇಲ ಮತ್ತು ಪ್ರಕಟನೆ ಸಮತಿ ಸರಣಿಗಳು (ಸಿಲ್ವರ್ ಸ್ಪ್ರಿಂಗ್, ಎಮ್ಡಿ : ಬಿಬ್ಲಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, 1992) ಸಂಪುಟ 7, ಪುಟ 206.

## ಚರ್ಚಿಸಬೇಕಾದ ಪ್ರಶ್ನೆಗಳು

1. ಏಳು ಮುದ್ರೆಗಳು ಪ್ರಾರಂಭವಾದ ದೃಶ್ಯದಿಂದ ನೀವು ಯಾವ ಅಮೂಲ್ಯ ಪಾಠಗಳನ್ನು ಕಲಿತಿದ್ದೀರಿ? ಭೂಮಿಯ ಮೇಲೆ ಎಷ್ಟು ಕೆಟ್ಟ ಸಂಗತಿಗಳು ಇದ್ದರೂ, ದೇವರು ಇನ್ನೂ ಸಾರ್ವಭೌಮನಾಗಿರುತ್ತಾನೆ ಮತ್ತು ಅಂತಿಮವಾಗಿ ನಾವು ಕ್ರಿಸ್ತನಲ್ಲಿರುವ ಎಲ್ಲಾ ಭರವಸೆಗಳು ನೆರವೇರುತ್ತದೆ ಎಂದು ಹೇಗೆ ತೋರಿಸುತ್ತದೆ?

2. ಕೆಳಗಿನ ಹೇಳಿಕೆಯನ್ನು ಪ್ರತಿಬಿಂಬಿಸುತ್ತದೆ: "ಸಭೆಯು ಮನುಷ್ಯರಿಗೆ ರಕ್ಷಣೆ ಕೊಡುವ ದೇವರ ನೇಮಕ ಸಂಸ್ಥೆಯಾಗಿದೆ. ಇದು ಸೇವೆಗಾಗಿ ಆಯೋಜಿಸಲ್ಪಟ್ಟಿತು ಮತ್ತು ಅದರ ಉದ್ದೇಶವು ಸುವಾರ್ತೆಯನ್ನು ಜಗತ್ತಿಗೆ ಕೊಂಡೊಯ್ಯುವುದು"– ಎಲೆನ್ ಜಿ ವೈಟ್ಸ್ ದ ಆಕ್ಟ್ಸ್ ಆಫ್ ದ ಅಪೋಸ್ತಲ್ಸ್, ಪುಟ 9. ನಿಮ್ಮ ಸ್ಥಳೀಯ ಸಭೆ ಬಗ್ಗೆ ಯೋಚಿಸಿ. ಸುವಾರ್ತೆ ಸಂದೇಶದೊಂದಿಗೆ ಜನರನ್ನು ತಲುಪಲು ಹೆಚ್ಚು ವಿಶ್ವಾಸಾರ್ಹರಾಗಿರುವುದು ಹೇಗೆ?

3. ತರಗತಿಯಲ್ಲಿ ನಿಮ್ಮ ಉತ್ತರವನ್ನು ಗುರುವಾದ ಅಂತಿಮ ಪ್ರಶ್ನೆಗೆ ತನ್ನಿ: ಆತನು ಬರುವ ದಿನವನ್ನು ಯಾರು ತಾಳಾರು ಮತ್ತು ಅವರು ಏಕೆ ಸಹಿಸಿಕೊಳ್ಳಬಲ್ಲರು? ಅವರು ಬರುವ ದಿನಕ್ಕೆ ತಯಾರಾಗಬೇಕೆಂದು ನಾವು ಇಂದು ಹೇಗೆ ಜೀವಿಸಬೇಕೆಂಬುದರ ಕುರಿತು ನಿಮ್ಮ ಉತ್ತರದ ಪರಿಣಾಮಗಳನ್ನು ಚರ್ಚಿಸಿ.